**<u>ಸಾಕ್ಷಿಯನ್ನು ದಿನಾಂಕ 24-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಂ.ಡಿ.ಕೆ ವಕೀಲರಿಂದಃ</u>**

1. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಮತ್ತು ಸಾಕ್ಷಿಗೆ ಕಳುಹಿಸಲಾಗಿದ್ದ ಸುಮನ್ಸ್ ದಾಖಲೆಯನ್ನು ತೋರಿಸಲಾಯಿತು. ಈಗ ನನಗೆ ತೋರಿಸಲಾದ ಸಮನ್ಸ್‌ನ್ನು ಜೇಡಿಕಟ್ಟೆ ಗ್ರಾಮದಲ್ಲಿರುವ ನನ್ನ ವಿಳಾಸಕ್ಕೆ ನ್ಯಾಯಾಲಯದಿಂದ ಜಾರಿಗೊಳಿಸಲಾಗಿದೆ ಮತ್ತು ಸದರಿ ದಾಖಲೆಯಲ್ಲಿ ನನ್ನ ಸಹಿ ಕೂಡ ಇದೆ ಎಂದರೆ ಸಾಕ್ಷಿ ನ್ಯಾಯಾಲಯದವರು ನನಗೆ ಫೋನ್ ಮಾಡಿ ಜೇಡಿಕಟ್ಟೆಯಲ್ಲಿರುವ ಕೋಳಿ ಅಂಗಡಿ ವಿಳಾಸದಲ್ಲಿ ಇದ್ದೀರಾ ಎಂದು ವಿಚಾರಿಸಿದ್ದರು ಆಗ ನಾನು ಸದರಿ ವಿಳಾಸದಲ್ಲಿ ವಾಸವಿಲ್ಲ ಜೇಡಿಕಟ್ಟೆ ಎ ಕೆ ಕಾಲೋನಿಯಲ್ಲಿ ವಾಸವಿದ್ದೇನೆ ಎಂದು ತಿಳಿಸಿದ ಮೇರೆಗೆ ನ್ಯಾಯಾಲಯದವರು ಸದರಿ ಕಾಲೋನಿಗೆ ಬಂದು ನೀವು ತೋರಿಸಿದ ಸಮನ್ಸ್ ಜಾರಿ ಮಾಡಿದರು ಎನ್ನುತ್ತಾರೆ. ಸದರಿ ಸಮನ್ಸ್‌ನಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲೆಯನ್ನು **<u>ನಿ.ಪಿ.–4</u>** ಎಂದು ಮತ್ತು ಸಾಕ್ಷಿಯ ಸಹಿಯನ್ನು **<u>ನಿ.ಪಿ.–4(ಎ)</u>** ಎಂದು ಗುರುತಿಸಲಾಯಿತು. ನಿ.ಪಿ.–4 ರ ಸಮನ್ಸ್‌ನ್ನು ವಾದ ಪತ್ರದಲ್ಲಿ ತೋರಿಸಲಾಗಿರುವ ವಿಳಾಸದಲ್ಲೇ ನಾನು ಸ್ವೀಕರಿಸಿದ್ದರೂ ಸಹ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಈ ದಾವೆ ದಾಖಲಿಸುವ ಮೊದಲು ವಾದಿ ಚೆಕ್ ಅಮಾನ್ಯಗೊಂಡಿರುವ ಬಗ್ಗೆ ನನಗೆ

ನೋಟಿಸು ಕಳುಹಿಸಿದ್ದರು ಎಂದರೆ ಸಾಕ್ಷಿ ನಾನು ಸದರಿ ನೋಟಿಸನ್ನು ಸ್ವೀಕರಿಸಿಲ್ಲ ಎನ್ನುತ್ತಾರೆ. ವಾದ ಪತ್ರ, ನಿ.ಪಿ.–4 ರ ದಾಖಲೆ ಮತ್ತು ವಾದಿ ನನಗೆ ಕೊಟ್ಟಿದ್ದ ನೋಟಿಸಿನಲ್ಲಿ ಉಲ್ಲೇಖಿಸಿರುವ ವಿಳಾಸದಲ್ಲೇ ನಾನು ವಾಸವಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿ.ಪಿ.–1 ರ ಚೆಕ್ ನನ್ನ ಖಾತೆಗೆ ಸೇರಿದೆ ಮತ್ತು ಅದರಲ್ಲಿರುವ ಸಹಿ ಕೂಡ ನನ್ನದು ಎಂದರೆ ಸರಿ. ಸಾಕ್ಷಿ ಪುನಃ ಸದರಿ ಚೆಕ್ಕಿಗೆ ಕೇವಲ ಸಹಿ ಮಾಡಿ ಚೀಟಿ ವ್ಯವಹಾರದ ಸಂಬಂಧ ವಾದಿ ಗಂಡ ಸತೀಶ್ ಎಂಬುವವರಿಗೆ ಕೊಟ್ಟಿದ್ದೆ ಎನ್ನುತ್ತಾರೆ. ಸದರಿ ಸತೀಶ್ ಚೀಟಿ ವ್ಯವಹಾರ ಮಾಡುತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ವಾದಿ ಅಥವಾ ಆಕೆಯ ಗಂಡ ಚೀಟಿ ವ್ಯವಹಾರವನ್ನು ಯಾವತ್ತು ಮಾಡಿಲ್ಲ ಮತ್ತು ನಾನು ನನ್ನ ಜವಬ್ದಾರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ವಾದಿಯ ಗಂಡ ಆಸ್ಪತ್ರೆಗೆ ದಾಖಲಾಗಿದ್ದಾಗ ರೂ.50 ಸಾವಿರ ಪಾವತಿ ಮಾಡಿದ್ದೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 31.12.2022 ರಂದು ಆಸ್ಪತ್ರೆಯಲ್ಲಿ ರೂ.50 ಸಾವಿರ ನಗದಾಗಿ ಕೊಟ್ಟಿರುತ್ತೇನೆ ಎಂದು ನಾನು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ರೂ.70 ಸಾವಿರ ಹಣವನ್ನು ವಾದಿಗೆ ಕೊಡಲು ಯಾವಾಗ ಹೋಗಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಆಕೆಯ ಗಂಡ ತೀರಿಕೊಂಡ 4 ತಿಂಗಳ ನಂತರ ಹೋಗಿದ್ದೆ ಎನ್ನುತ್ತಾರೆ. ಆಗ ನನ್ನ ಜೊತೆ ರೋಹಿಣಿ ಕುಮಾರ್ ಇದ್ದರು. ಬೇರೆಯವರಿಗೆ

ಸೇರಿದ್ದ ಚೆಕ್ ಗಳು ವಾದಿಯ ಮನೆಯಲ್ಲಿತ್ತು, ಅವರೆಲ್ಲರೂ ವಾದಿಯ ಗಂಡನಿಂದ ಸಾಲ ಪಡೆದಿದ್ದರು ಮತ್ತು ಸಾಲವನ್ನು ವಾಪಸ್ಸು ಕೊಡಿಸುವ ಜವಬ್ದಾರಿಯನ್ನು ನಾನು ತೆಗೆದುಕೊಳ್ಳಬೇಕೆಂಬ ಷರತ್ತು ವಾದಿ ಹಾಕಿದ್ದರು ಮತ್ತು ನಾನು ಒಪ್ಪದೆ ಇದ್ದಾಗ ನನ್ನ ಸಹಿ ಇರುವ 2 ಖಾಲಿ ಚೆಕ್ ಗಳನ್ನು ಭರ್ತಿ ಮಾಡಿ ಸುಳ್ಳು ದಾವೆ ದಾಖಲಿಸಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

5. ಚೀಟಿ ವ್ಯವಹಾರದ ಸಂಬಂಧ ಕೊಡಲಾದ ಖಾಲಿ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು ಹಣ ಕೊಡುವಂತೆ ಬೇಡಿಕೆ ಇಡುತ್ತಿರುವ ವಾದಿ ವಿರುದ್ದ ಕ್ರಮ ಕೈಗೊಳ್ಳಬೇಕೆಂದು ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. ಚೆಕ್ ದುರ್ಬಳಕೆ ಮಾಡದಂತೆ ತಡೆಯಲು ನಾನು ವಾದಿ ವಿರುದ್ಧ ನ್ಯಾಯಾಲಯಕ್ಕೆ ದಾವೆಯನ್ನು ಹಾಕಿಲ್ಲ. ನನ್ನಂತೆ ವಾದಿಯ ಗಂಡನಿಗೆ ಖಾಲಿ ಚೆಕ್ ಕೊಟ್ಟಿದ್ದ ಇತರೆ ಚೀಟಿ ಸದಸ್ಯರು ವಾದಿ ವಿರುದ್ದ ಕಾನೂನು ಕ್ರಮ ಜರುಗಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನಂತೆ ಬೇರೆ ಯಾರ ವಿರುದ್ದ ವಾದಿ ಇದೇ ರೀತಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಸೇರಿ ಹಲವರ ವಿರುದ್ದ ಖಾಲಿ ಚೆಕ್ ದುರ್ಬಳಕೆ ಮಾಡಿಕೊಂಡು ವಾದಿ ಸುಳ್ಳು ದಾವೆ ಹಾಕಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

6. ನನ್ನ ಪರ ಸಾಕ್ಷಿ ಹೇಳಿರುವ ರೋಹಿಣಿ ಕುಮಾರ್, ಮಲೇಶ್ ಹಾಗೂ ಪಾಪಣ್ಣ ಎಂಬುವವರು ನನಗೆ ಸುಮಾರು 10-15 ವರ್ಷಗಳಿಂದ ಸ್ನೇಹಿತರು. ಸಾಕ್ಷಿ ಮಲ್ಲೇಶ್

ರವರಿಗೆ ವಾದಿ ಮತ್ತು ಆಕೆಯ ಅಣ್ಣ ಬೆದರಿಕೆ ಹಾಕಿದರು ಎಂದು ನಿಮಗೆ ಯಾರು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಮುಂದೆಯೇ ಬೆದರಿಸಿದರು ಎನ್ನುತ್ತಾರೆ. ಆ ರೀತಿ ಸುಳ್ಳು ಕಥೆ ಸೃಷ್ಟಿಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಾದಿಯ ಕುಟುಂಬದ ಆರ್ಥಿಕ ಸ್ಥಿತಿ–ಗತಿ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರ ಆರ್ಥಿಕ ಹಿನ್ನೆಲೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಅವರು ನನಗೆ ರೂ.4 ಲಕ್ಷ ಸಾಲ ಕೊಡುವಷ್ಟು ಸಮರ್ಥರಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯಿಂದ ಪಡೆದಿರುವ ಸದರಿ ಸಾಲವನ್ನು ಮರುಪಾವತಿಸುವುದನ್ನು ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**